ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

ಸಿ.ಸಿ. ನಂ: **216/20**

| | | | |
|---|---|---|---|
| ಸಾಕ್ಷಿದಾರರ ಹೆಸರು | ಗೋವಿಂದರಾಜು | ಸಿ.ಡಬ್ಲ್ಯೂ- | 7 |
| ತಂದೆ/ಗಂಡನ ಹೆಸರು | ಲಕ್ಷ್ಮಿನರಸಿಂಹಯ್ಯ | ಪಿ.ಡಬ್ಲ್ಯೂ | 5 |
| ವಯಸ್ಸು | 76 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ವ್ಯಾಪಾರ | | |
| ವಾಸ | ಅರಸೀಕೆರೆ | 20.03.2025 | |

ಮುಖ್ಯ ವಿಚಾರಣೆ ಸಸಅ ರವರಿಂದ:-

ಸುಮಾರು **6** ವರ್ಷಗಳ ಹಿಂದೆ ನನ್ನ ಮನೆಯ ಪಕ್ಕದ ಖಾಲಿ ಸೈಟ್ ನಲ್ಲಿ ಗಿಡ ಗಂಟೆಗಳು ಬೆಳೆದಿದ್ದು, ಬೇಲಿಯಲ್ಲಿ ಗಂಧದ ಚಿಕ್ಕ ಮರಗಳು ಬೆಳೆದಿದ್ದವು. **2019** ರಲ್ಲಿ ನನ್ನ ಸಂಸಾರ ಸಮೇತ ಸಂಬಂಧಿಕರ ಮನೆಗೆ ಹೋಗಿದ್ದಾಗ ಯಾರೋ ಕಳ್ಳರು ಆ ಗಂಧದ ಮರಗಳನ್ನು ಕಡಿದುಕೊಂಡು ಹೋಗಿರುವುದು ಕಂಡು ಬಂದಿರುತ್ತದೆ. ನಾನು ಪೋಲೀಸರಿಗೆ ದೂರು ಸಲ್ಲಿಸಬೇಕೆನ್ನುವಷ್ಟರಲ್ಲಿ ಇಬ್ಬರು ಆಸಾಮಿಗಳನ್ನು ಪೋಲೀಸರೇ ನಮ್ಮ ಮನೆಗೆ ಕರೆದುಕೊಂಡು ಬಂದು ಅವರೇ ಗಂಧದ ಮರಗಳನ್ನು ಕಡಿದುಕೊಂಡು ಹೋಗಿರುವುದಾಗಿ ತಿಳಿಸಿದರು. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ತೋರಿಸಲಾಗಿ ಅವರು ಗುರುತಿಸಿರುವುದಿಲ್ಲ. ಪೋಲೀಸರು ಆ ಆಸಾಮಿಗಳ ಹೆಸರುಗಳನ್ನು ಹೇಳಿರುವುದಿಲ್ಲ. ಪೋಲೀಸರು ಆರೋಪಿತರ ಬಳಿಯಿಂದ ಯಾವ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಸಾಕ್ಷಿಗೆ ಪೋಲೀಸರು ವಶಪಡಿಸಿಕೊಂಡಿದ್ದ ಗಂಧದ ಮರದ ತುಂಡುಗಳನ್ನು ತೋರಿಸಲಾಗಿ ಅವುಗಳನ್ನು ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲು: ಸಸಅ ರವರಿಂದ:-

ಆರೋಪಿತರೇ ಗಂಧದ ಮರಗಳನ್ನು ಕಡಿದುಕೊಂಡು ಹೋಗಿದ್ದು ಅವರನ್ನೇ ಪೋಲೀಸರು ತೋರಿಸಿ ಅವರುಗಳ ಹೆಸರು ಕಿರಣ್ ಮತ್ತು ಸಂತೋಷ್ ಎಂದು

ಹೇಳಿದರು ಎಂದರೆ ಸರಿಯಲ್ಲ. ಅದೇ ರೀತಿ ಪೋಲೀಸರು ದಿಃ 30-12-2019 ರಂದು ಆರೋಪಿತರು ಗಂಧದ ಮರದ ತುಂಡುಗಳನ್ನು ಬೈಕ್ ನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ಹಾಸನ ರಸ್ತೆಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಅವರನ್ನು ಹಿಡಿದುಕೊಂಡು ಅವರ ಬಳಿಯಿಂದ ಗಂಧದ ಮರದ ತುಂಡುಗಳನ್ನು ಹಾಗೂ ಬೈಕ್ ನ್ನು ವಶಪಡಿಸಿಕೊಂಡ ಬಗ್ಗೆ ಪೋಲೀಸರು ತಿಳಿಸಿರುತ್ತಾರೆ ನಾನು ಆ ರೀತಿ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ತಿಳಿದಿದ್ದು ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಇಲ್ಲಾ.</u>

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿಃ **20-03-2025.**